ಕಂ/ಉಪಲೋಕ್/ಜಿಎಲ್‌ಬಿ/1204/2021

# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1204/2021**
**ಪಿಓ.ಎ.ಆರ್.ಇ-5**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು ದಿನಾಂಕ :24/11/2021

26

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ.ದೇವಣ್ಣ ಬಿನ್ ಬುಲ್ಲಯ್ಯ, ಗ್ರಾಮಲೆಕ್ಕಾಧಿಕಾರಿ, ಚಿಕ್ಕಲಪರ್ವಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ರಾಯಚೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ದೇವಣ್ಣ ಬಿನ್ ಬುಲ್ಲಯ್ಯ, ಗ್ರಾಮಲೆಕ್ಕಾಧಿಕಾರಿ, ಚಿಕ್ಕಲಪರ್ವಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ನಿಮ್ಮ ಮೇಲೆ ಶ್ರೀ. **ಬೆಟ್ಟಪ್ಪ ಬಿನ್ ನಾಗಪ್ಪ, ಸಾ: ಹೋಕ್ರಾಣಿ, ತಾಲ್ಲೂಕು ಮಾನ್ವಿ, ಜಿಲ್ಲಾ ರಾಯಚೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ತಮ್ಮ ಮಾವನವರಾದ ಶಾಂತಪ್ಪ ಹಾಗೂ ಕ್ರಿಷ್ಟಪ್ಪ ಇವರ ಹೆಂಡತಿಯರಾದ ಮರಿಯಮ್ಮ ಮತ್ತು ದೇವಮ್ಮ ಹಾಗೂ ಪರಿಶಿಷ್ಟ ಜಾತಿ ಗುಂಪಿನ ಭೂರಹಿತ ಮಹಿಳೆಯರಿಗೆ ಭೂಮಿಯ ಮಂಜೂರಾತಿಗಾಗಿ ತಡೆಪಟ್ಟಿಯನ್ನು ಸಲ್ಲಿಸಲು ಎದುರುದಾರರು 10,000/- ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದುರ್ನಡತೆ ತೋರಿಸಿದ ಬಗ್ಗೆ ಬರೆದುಕೊಂಡಿದ್ದು ಸದರಿ ದೂರು ದಿ:06/03/2018 ರಂದು ರಾಯಚೂರು ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ.02/2018ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1)(ಡಿ) ರೆ/ವಿ. 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 10,000/-ರೂ. ಲಂಚ ಪಡೆದು ದುರ್ನಡತೆ ತೋರಿರುವುದು

ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-01 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಬೆಟ್ಟಪ್ಪ ಬಿನ್ ನಾಗಪ್ಪ, ಸಾ: ಹೋಕ್ರಾಣಿ, ತಾಲ್ಲೂಕು ಮಾನ್ವಿ, ಜಿಲ್ಲಾ ರಾಯಚೂರು** ಇವರು ತಮ್ಮ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ತಮ್ಮ ಮಾವನವರಾದ ಶಾಂತಪ್ಪ ಹಾಗೂ ಕ್ರಿಷ್ಟಪ್ಪ ಇವರ ಹೆಂಡತಿಯರಾದ ಮರಿಯಮ್ಮ ಮತ್ತು ದೇವಮ್ಮ ಹಾಗೂ ಪರಿಶಿಷ್ಟ ಜಾತಿ ಗುಂಪಿನ ಭೂರಹಿತ ಮಹಿಳೆಯರಿಗೆ ಭೂಮಿಯ ಮಂಜೂರಾತಿಗಾಗಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ರಾಯಚೂರು ಇವರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ತಡೆಪಟ್ಟಿ ಎಂಬ ದಾಖಲೆ ಬೇಕಾಗಿದ್ದು, ಅದಕ್ಕಾಗಿ ತಡೆಪಟ್ಟಿಯನ್ನು ಚಿಕ್ಕಲಪರ್ವಿ ಗ್ರಾಮಲೆಕ್ಕಾಧಿಕಾರಿ ನೀಡಿದ್ದು, ಸದರಿ ತಡೆಪಟ್ಟಿಯನ್ನು ಹಾಗೂ ಮೂರು ಜನ ಭೂಮಾಲೀಕರು ನಿಗಮಕ್ಕೆ ಭೂಮಿ ಮಾರಾಟ ಮಾಡಲು ಕೊಟ್ಟ ಒಪ್ಪಿಗೆ ಪತ್ರ ಮತ್ತು ಅದಕ್ಕೆ ಸಂಬಂಧಿಸಿದ ನಮೂನೆ-1 ಅನ್ನು ಈಗಾಗಲೇ ಮಾನ್ವಿ ತಹಶೀಲ್ದಾರ್‌ರವರು ನೀಡಿದ್ದು, ಸದರಿ ದಾಖಲಾತಿಗಳನ್ನು ಎದುರುದಾರರು ನೀಡಲು 10,000/- ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:06/03/2018 ರಂದು ರಾಯಚೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.02/2018 ರಲ್ಲಿ, ಕಲಂ 7 ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಪಿ. ರಾಮಸ್ವಾಮಿ, 2) ಸೈಯದ್ ಜಕ್ಕಿ ಅಹಮ್ಮದ್ (ನೆರಳುಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಮೊಬೈಲ್‌ನಲ್ಲಿಯ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಸದರಿ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡಲು ತಂದ ರೂ.

10,000/- (2,000 X 2, 500X12) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ದಾಖಲಿಸಿಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ ಪಿ.ರಾಮಸ್ವಾಮಿ ಇವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಿ.ರಾಮಸ್ವಾಮಿ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಸೈಯದ್ ಜಕ್ಕಿ ಅಹಮ್ಮದ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ವಾಚನ್ನು ಬಿಚ್ಚಿ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಹಣ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 06-03-2018 ರಂದು ಬೆಳಿಗ್ಗೆ 9.40 ರಿಂದ 10.40 ಘಂಟೆಯವರೆಗೆ ರಾಯಚೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಮಾನ್ವಿ ನಗರದ ವಾರ್ಡ್ ನಂ.5 ರಹಮ್ಮತ್ ನಗರದಲ್ಲಿರುವ ಎದುರುದಾರರ ಖಾಸಗಿ ಆಫೀಸ್ ರೂಮಿನ ಹತ್ತಿರ ಬಂದಿದ್ದು, ಎದುರುದಾರರಿಗೆ ಫೋನ್ ಮಾಡಲಾಗಿ ತಾನು ಹೊರಗಡೆ ಇದ್ದು 5 ನಿಮಿಷದಲ್ಲಿ ತನ್ನ ಖಾಸಗಿ ಆಫೀಸ್ ರೂಮಿನ ಹತ್ತಿರ ಬರುವುದಾಗಿ ತಿಳಿಸಿರುತ್ತಾರೆ. ದಾಳಿತಂಡದವರು ಎದುರುದಾರರ ಖಾಸಗಿ ಆಫೀಸ್ ರೂಮಿನ ಹತ್ತಿರದಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ಎದುರುದಾರರು ತಾನು ಹೇಳಿದಂತೆ ಸುಮಾರು 11.45 ಗಂಟೆಗೆ ಖಾಸಗಿ ಆಫೀಸ್ ರೂಮಿಗೆ ಬಂದಿದ್ದು, ದೂರುದಾರರಿಂದ ಹಣ ಸ್ವೀಕರಿಸಿ, ಅದನ್ನು ಎಣಿಸಿ, ಖಾಸಗಿ ಆಫೀಸ್ ರೂಮಿನಲ್ಲಿ ವಾಲೇಕರ್ ಆಗಿ ಕೆಲಸಮಾಡುತ್ತಿದ್ದ ಶ್ರೀಮತಿ. ಹನುಮಂತಿ

ಇವಳ ಕೈಯಲ್ಲಿ ಕೊಟ್ಟಿರುತ್ತಾರೆ. ಹಣ ಪಡೆದ ನಂತರ ದೂರುದಾರರು ತನಿಖಾಧಿಕಾರಿಗೆ ಸಂಜ್ಞೆ ನೀಡಿದ್ದು, ತಕ್ಷಣ ತನಿಖಾಧಿಕಾರಿಗಳು ಎದುರುದಾರರ ಖಾಸಗಿ ಆಫೀಸ್ ರೂಮಿನ ಒಳಗೆ ಬಂದು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಎದುರುದಾರರ ಹಾಗೂ ಶ್ರೀಮತಿ. ಹನುಮಂತಿ ಇವರುಗಳ ಎರಡೂ ಕೈ ಬೆರಳುಗಳನ್ನು ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ ಹಣವನ್ನು ಶ್ರೀಮತಿ. ಹನುಮಂತಿ ಇವಳ ಕೈಯಲ್ಲಿ ಕೊಟ್ಟಿರುವುದಾಗಿ ತಿಳಿಸಿದ್ದು, ಸದರಿ ಹಣವು ಈ ಮೊದಲೆ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಹೊಂದುತ್ತವೆ ಎಂದು ಪಂಚರು ನುಡಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಮೊದಲೆ ದೂರುದಾರರಿಗೆ ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ಹಣನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ ಮತ್ತು ಅದನ್ನು ಪಂಚರಿಗೆ ಕೇಳಿಸಿರುತ್ತಾರೆ. ಎದುರುದಾರರಿಗೆ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ 34 ತಡೆಪಟ್ಟಿಗಳ / ದಾಖಲಾತಿಗಳ ಬಗ್ಗೆ ಕೇಳಲಾಗಿ, ದಾಖಲಾತಿಗಳು ರೆಡಿ ಇರುವುದಾಗಿ ತಿಳಿಸಿದ್ದು, ಸದರಿ ದಾಖಲಾತಿಗಳನ್ನು ಕಂದಾಯ ನಿರೀಕ್ಷಕರಾದ ವಿರೂಪಣ್ಣ ಇವರಿಂದ ದೃಢೀಕರಿಸಿ ಪಡೆದುಕೊಂಡಿರುತ್ತಾರೆ. ಈಗಾಗಲೆ ದಾಖಲಾದ ಎರಡೂ ಸಂಭಾಷಣೆಗಳನ್ನು ಕಂದಾಯ ನಿರೀಕ್ಷಕರಾದ ವಿರೂಪಣ್ಣ ಇವರಿಗೆ ಕೇಳಿಸಲಾಗಿ, ಸಂಭಾಷಣೆಯಲ್ಲಿ ಇದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಂದ ರಕ್ಷಣಾತ್ಮಕ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 06/03/2018 ರಂದು 11.45 ರಿಂದ ಮಧ್ಯಾಹ್ನ 2.30ರ ವರೆಗೆ ಗಂಟೆಯವರೆಗೆ ಮಾನ್ವಿ ನಗರದ ವಾರ್ಡ್ ನಂ.5 ರಹಮ್ಮತ್ ನಗರದಲ್ಲಿರುವ ಎದುರುದಾರರ ಖಾಸಗಿ ಆಫೀಸ್ ರೂಮಿನಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಎದುರುದಾರರು ದೂರುದಾರರೊಂದಿಗೆ ಮಾಡಿದ ಸಂಭಾಷಣೆಯಲ್ಲಿಯ ಧ್ವನಿಯು ಎದುರುದಾರರ

ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುತ್ತಾರೆ.

3. ಮೇಲ್ಕಂಡ ಆಪಾದನೆಗಳ ಕುರಿತಂತೆ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ದಿ: 10/08/2021 ರಂದು ಜಾರಿ ಮಾಡಿದ್ದು, ಸದರಿಯವರು ಸಲ್ಲಿಸಿದ ಸಮಜಾಯಿಷಿಯು ಈ ಕಚೇರಿಗೆ ದಿ: 19/08/2021 ರಂದು ತಲುಪಿರುತ್ತದೆ. ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ಭೂ ಮಂಜೂರಾತಿಗಾಗಿ ತಡೆಪಟ್ಟಿಯನ್ನು ನೀಡಲು ರೂ. 10,000/- ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಮತ್ತು ದುರ್ನಡತೆ ತೋರಿರುವುದಿಲ್ಲ. ತನ್ನ ಮೇಲೆ ಮಾಡಿದ ಆಪಾದನೆ ಸತ್ಯಕ್ಕೆ ದೂರವಾಗಿದ್ದು, ಪ್ರಾಯೋಗಿಕ ಪಂಚನಾಮೆಯ ಕಾಲದಲ್ಲಿ ಮಾಡಿದ ನಡವಳಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಅದೇ ಪ್ರಕಾರ ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಮಾನ್ವಿ ನಗರದ ತಮ್ಮ ಖಾಸಗಿ ಆಫೀಸ್ ರೂಂನಲ್ಲಿ ಪಡೆದುಕೊಂಡು ಎಣಿಸಿ ಅದನ್ನು ವಾಲೇಕಾರಳಾಗಿ ಕೆಲಸ ಮಾಡುತ್ತಿದ್ದ ಶ್ರೀಮತಿ ಹನುಮಂತಿ ಇವಳ ಕೈಗೆ ಕೊಟ್ಟಿರುವುದನ್ನು ಹಾಗೂ ತನಿಖಾಧಿಕಾರಿಗಳು ಎರಡು ಜನರ ಕೈಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುವುದನ್ನು ಮತ್ತು ಟ್ರ್ಯಾಪ್ ಪಂಚನಾಮೆಯ ಕಾಲಕ್ಕೆ ನಡೆದ ನಡವಳಿಗಳನ್ನು ಅಲ್ಲಗಳೆದಿರುತ್ತಾರೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷಿದಾರರ ಹೇಳಿಕೆಗಳು ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಗಿಸುವ ಉದ್ದೇಶದಿಂದ ಸೃಷ್ಟಿ ಮಾಡಲಾಗಿರುತ್ತದೆ. ಆದ್ದರಿಂದ ತನ್ನ ವಿರುದ್ಧ ಯಾವುದೇ ಶಿಸ್ತು ಕ್ರಮ ಜರುಗಿಸಬಾರದೆಂದು ವಿನಂತಿಸಿಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಬರಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟು, ಲಂಚವನ್ನು ಪಡೆದುಕೊಂಡು ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡು ಬರುತ್ತದೆ.

ತನಿಖಾಧಿಕಾರಿಗಳು ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾದಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ನಿವೇದಿಸಿಕೊಂಡು ನಿಲುವುಗಳನ್ನು ನಂಬಲು ಈ ಹಂತದಲ್ಲಿ ಸಾಧ್ಯವಿರುವುದಿಲ್ಲ ಮತ್ತು ಅದಕ್ಕೆ ಸಾಕಷ್ಟು ಪುರಾವೆಗಳು ಕಂಡು ಬರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಆಡಳಿತಾತ್ಮಕ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

5. ದೂರಿನಲ್ಲಿ ಮಾಡಿದ ಆಪಾದನೆ, ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ನೀವು ನಿಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(i) ರಿಂದ (iV) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

6. ಆದ್ದರಿಂದ ಮೇಲ್ಕಂಡ ಅಂಶಗಳಿಗೆ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 (ಎ) ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

26/11/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಗೌರವಾನ್ವಿತ ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.